ಮೀನುಗಾರಿಕೆ ಇಲಾಖೆಯ (ಸಹಾಯಕ ನಿರ್ದೇಶಕರು)

1. ಕಾರ್ಕಳ
2. ಮಾಲೂರು
3. ಔರಾದ

ಸಹಕಾರಿ ಇಲಾಖೆಯ (ಸಹಕಾರ ಸಂಘಗಳ ಸಹಾಯಕ ನಿಬಂಧಕರು)

1. ರಾಮನಗರ
2. ಹೆಗ್ಗಡದೇವನಕೋಟೆ
3. ಪಾಂಡವಪುರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ

(ಬಾಲ ವಿಕಾಸ ಯೋಜನಾಧಿಕಾರಿಗಳು)

1. ಹೊಸದುರ್ಗ
2. ಮಂಗಳೂರು

ತೋಟಗಾರಿಕೆ ಇಲಾಖೆ(ಸಹಾಯಕ ತೋಟಗಾರಿಕಾ ಅಧಿಕಾರಿ)

1. ಸೊರಬ

ಕರ್ನಾಟಕ ಸರ್ಕಾರ ಸಚಿವಾಲಯ (ಶಾಖಾಧಿಕಾರಿಗಳು)

1. ತುರುವೇಕೆರೆ
2. ಜಗಳೂರು
3. ರಾಯಬಾಗ್

ವಿಷಯ : ಬೈಲಹೊಂಗಲದ ಕೆಲವು ಕಡೆ ಕುಡಿಯುವ ನೀರಿನ ಯೋಜನೆಗಳು ಸ್ಥಗಿತಗೊಂಡಿರುವುದರ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 422 (744)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಿರೇಬೂದನೂರು ಕುದರನಹಟ್ಟಿ, ತಡಸಲೂರು ಏಣಗಿ ಕುಡಿಯುವ ನೀರಿನ ಯೋಜನೆಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ?

2. ಈ ಕೆಲಸಗಳು ಮಂದ ಗತಿಯಲ್ಲಿ ನಡೆಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಈ ಕೆಲಸಗಳಿಗೆ ಏನಾದರೂ ಆರ್ಥಿಕ ತೊಂದರೆ ಇದೆಯೇ? ಹಾಗಿದ್ದಲ್ಲಿ ಈ ಕೆಲಸಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) :-

1. ಹೌದು

2. ಬಂದಿದೆ

3. ಈ ಕೆಲಸಗಳಿಗಾಗಿ ಆರ್ಥಿಕ ತೊಂದರೆ ಇಲ್ಲ. ಈ ಎಲ್ಲಾ ಯೋಜನೆಗಳನ್ನು 1995ರ ಮಾರ್ಚ್ ಅಂತ್ಯದೊಳಗೆ ಪೂರ್ತಿಗೊಳಿಸಲು ಯೋಜಿಸಲಾಗಿದೆ.

ವಿಷಯ : ರಾಜ್ಯದಲ್ಲಿ ಒಂದು ಅಂಕಿ ಲಾಟರಿ ಯೋಜನೆ ಬಂದ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 423 (743)

ಶ್ರೀ ಶಿವಾನಂದ .ಹೆಚ್. ಕೌಜಲಗಿ (ಬೈಲಹೊಂಗಲ) :- ಮಾನ್ಯ ಸಣ್ಣ ಉಳಿತಾಯ, ಲಾಟರಿಗಳು, ಕೆಜಿಐಡಿ ಮತ್ತು ಹೆಚ್‌ಕೆಡಿಬಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಂದಂಕಿ ಲಾಟರಿ ಯೋಜನೆಯು ಈಗ ರಾ[illegible]ಲ್ಲಿ ಚಲಾವಣೆಯಲ್ಲಿ ಇರುವುದೇ?

ಆ) ಹಾಗಿದ್ದಲ್ಲಿ, ಈ ಒಂದು ಅಂಕಿ ಲಾಟರಿ ಯೋಜನೆಯನ್ನು ಬಂದು ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮದನ ಗೋಪಾಲ್ ನಾಯಕ್ (ಸಣ್ಣ ಉಳಿತಾಯ, ಲಾಟರಿಗಳು, ಕೆಜಿಐಡಿ ಮತ್ತು ಹೆಚ್‌ಕೆಡಿಬಿ ರಾಜ್ಯ ಮಂತ್ರಿಗಳು) :-

ಅ) ಕರ್ನಾಟಕ ರಾಜ್ಯವು ತನ್ನ ಒಂದಂಕಿ ಲಾಟರಿಯನ್ನು ದಿನಾಂಕ : 29.11.92ರಿಂದ ರದ್ದು ಪಡಿಸಿದೆ. ಆದರೆ ಬೇರೆ ರಾಜ್ಯಗಳು ನಡೆಸಿರುವ ಲಾಟರಿಯ ಟಿಕೇಟುಗಳನ್ನು ದಿನಾಂಕ : 21.4.94ರ ತನ್ನ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯದ ನಿಗದಿ ಪಡಿಸಿರುವ ಷರತ್ತುಗಳಿಗೆ ಅನುಗುಣವಾಗಿ ಇದೆಯೇ ಎಂಬುದನ್ನು ಪರಿಶೀಲಿಸಿ ಅವುಗಳ ಮಾರಾಟಕ್ಕೆ ಅನುಮೋದನೆ ನೀಡಲಾಗುತ್ತಿದೆ.